ಪಾಲುದಾರರು ಹಾಗೂ ಸಹೋದ್ಯೋಗಿಯೆದುರು ತಾನು ಅಪರಾಧಿಯಂತೆ ನಿಂತರೂ, ಧೃತಿಗೆಡದೆ, ಪಾಲುದಾರರಲ್ಲಿ ತನಗೆ ಈ ರಹಸ್ಯವನ್ನು ಬಿಡಿಸಲು ಎರಡು ತಾಸುಗಳ ಅವಕಾಶ ನೀಡಬೇಕೆಂದು ವಿನಂತಿಸಿದಾಗ, ಪಾಲುದಾರರು ಒಂದು ಷರತ್ತಿನ ಮೇಲೆ ಒಪ್ಪಿದರಂತೆ. ಒಂದೊಮ್ಮೆ ವಿಫಲವಾದಲ್ಲಿ, ಕಾನೂನು ಕ್ರಮ ಎದುರಿಸಲು ಸಿದ್ಧರಾಗಬೇಕು, ಬದಲಿಗೆ ತಪ್ಪು ಒಪ್ಪಿಕೊಂಡರೆ, ತಾವು ಬೇರೆ ಮಾರ್ಗ ಚಿಂತಿಸಲು ತಯಾರು ಎಂದರಂತೆ. ಆದರೂ ತಾನು ರಹಸ್ಯ ಬಿಡಿಸಲು ಸಮಯವಾಕಾಶ ಕೋರಿ, ನಮ್ಮಲ್ಲಿಗೆ ಬಂದಿರುವುದಾಗಿ, ತನಗೆ ತಕ್ಷಣ ಸಹಾಯ ಮಾಡಬೇಕೆಂದು ನಾಗರಾಜು ಬೇಡಿಕೊಂಡ.

ನಾವು ಅದಕ್ಕೆ ಸಮ್ಮತಿಸಿದೆವು.

ನಮ್ಮ ಕಾರಿನಲ್ಲಿ, ನಾಗರಾಜುವಿನ ಕಾರನ್ನು ಹಿಂಬಾಲಿಸುತ್ತಾ, ಅಮ್ಮತ್ತಿಯ ಸನಿಹದಲ್ಲಿದ್ದ ಕಾವೇರಿ ಕಂಪನಿಯತ್ತ ಪಯಣಿಸುವಾಗ, ನಾನು ಅನುಮಾನ ಹೊರಹಾಕಿದೆ.

"ನಾಗರಾಜುವಿನ ಮಾತು ನಿಜವಿರಬಹುದೇ?"

"ಬಿದ್ದಪ್ಪ, ನಾವು ಇತ್ತೀಚೆಗಷ್ಟೇ ಬಗೆಹರಿಸಿದ, ಕಿರು ಬೆರಳು ಪ್ರಕರಣದ ರೀನಾ ಪೂಣಚ್ಚಳನ್ನು ನೀನು ಮರೆತಂತಿದೆ. ಆಕೆಯೂ ಮುಗ್ಧಳಂತೆ ಬಿಂಬಿಸಿಯೇ ನಮ್ಮಲ್ಲಿ ತನಿಖೆ ಕೋರಿ ಬಂದವಳಲ್ಲವೇ? ನಾವು ಎಲ್ಲಾ ಸಾಧ್ಯತೆಗಳನ್ನೂ ತೆರೆದಿಡಬೇಕು. ಪೂರ್ವಗ್ರಹ ಪೀಡಿತರಾದರೆ ತನಿಖೆಯ ಹಾದಿ ತಪ್ಪುತ್ತದೆ."

ಸುಮಾರು ಅರ್ಧ ತಾಸಿನಲ್ಲಿ ನಾವು ಅಮ್ಮತ್ತಿಯಲ್ಲಿದ್ದೆವು. ನಾಗರಾಜುವಿದ್ದು ಹೆಂಚಿನ ಸಾಧಾರಣವಾದ ಮನೆ. ಅಲ್ಲಿ ಕಾಯುತ್ತಿದ್ದ ಪಾಲುದಾರರಾದ ಮನು ಮುತ್ತಪ್ಪ, ಮಾರ್ಚಂಡ ಪ್ರವೀಣ, ಸುತನ್ ಸುಬ್ಬಯ್ಯ, ಕಚೇರಿಯ ಜವಾನ ತಮ್ಮು ಮತ್ತಿತರರ ಪರಿಚಯವನ್ನು ನಾಗರಾಜು ನಮಗೆ ಮಾಡಿಸಿದ. ನಾವು ಕುತೂಹಲದಿಂದ ಮನೆಯೊಳಗೆ ಅಡಿಯಿರಿಸಿದೆವು. ಎದುರಿಗೆ ಸಣ್ಣ ಹಜಾರ. ಅದಕ್ಕೆ ತಾಗಿಕೊಂಡು ಎರಡೂ ಭಾಗಗಳಲ್ಲಿ ಬೆಡ್‌ರೂಮುಗಳು. ಮಧ್ಯದ ಬಾಗಿಲ ಮೂಲಕ ಹೋದರೆ, ಚಿಕ್ಕ ಕೋಣೆ. ಅದಕ್ಕೆ ಒತ್ತಿಕೊಂಡು ಅಡುಗೆಕೋಣೆ. ನಾಗರಾಜು ನಮ್ಮನ್ನು ಎಡ ಭಾಗದಲ್ಲಿದ್ದ ಕೋಣೆಗೆ ಕರೆದೊಯ್ದ. ಹೆಚ್ಚೇನೂ ವಿಶಾಲವಾಗಿರದ ಅದರಲ್ಲಿ ಒಂದು ಕೊನೆಯಲ್ಲಿ ಗೋಡೆಗೆ ತಾಗಿಕೊಂಡು ಹಳೆಯ ಮಂಚ. ಕೊಠಡಿಯ ಮಧ್ಯಭಾಗದಲ್ಲಿ ಹಿಂಭಾಗದ ಗೋಡೆಗೆ ಆನಿಸಿಕೊಂಡು ಇದ್ದ ಖಾಲಿಯಾದ ಮೇಜಿನಲ್ಲಿ ಕಣ್ಣು ರಾಚುವಂತಿತ್ತು ಕೆಂಪಗಿನ ಫೈಲು. ನಾಗರಾಜು ಅದನ್ನು ತೆರೆದು ತೋರಿದ. ಅದರೊಳಗೆ ಚೊಕ್ಕವಾಗಿ ಟ್ಯಾಗನ್ನು ಕಟ್ಟಿ ಇರಿಸಿದ ಹಾಳೆಗಳು. ಎಲ್ಲವೂ ಆತ ಹೇಳಿದಂತೆಯೇ ದರಪಟ್ಟಿಗಳು!

"ಇದು ಎಲ್ಲಿಂದ ಬಂತು ಅಂತಲೇ ಗೊತ್ತಿಲ್ಲ, ಸಾರ್! ನನ್ನನ್ನು ಸಿಕ್ಕಿಸಿ ಹಾಕಿಸುವ ಉದ್ದೇಶದಿಂದ ಯಾರೋ ಇದನ್ನ ಇಲ್ಲಿರಿಸಿದ್ದಾರೆ." ನಾಗರಾಜುವಿನ ದನಿಯಲ್ಲಿ ವಿಶ್ವಾಸವಿತ್ತು.

ಮೇಜಿಗೆ ಸನಿಹದಲ್ಲಿಯೇ ಗೋಡೆಯಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ಅಡ್ಡ ಕಂಬಿಗಳಿರುವ ಹಳೆಯ ಮಾದರಿಯ ಕಿಟಕಿ. ಅದರ ಎರಡೂ ಬಾಗಿಲುಗಳು ಭದ್ರವಾಗಿ ಮುಚ್ಚಿದ್ದವು. ಬಹಳ ಸಮಯದಿಂದ ಅದನ್ನು ತೆಗೆದಂತಿರಲಿಲ್ಲ.

"ಈ ಕಿಟಕಿಯ ಬಾಗಿಲುಗಳನ್ನು ತೆಗೆಯದೆ ಕೆಲವು ತಿಂಗಳುಗಳಾಗಿರಬಹುದು. ಈ ಕೋಣೆಯನ್ನು ನಾನು ಉಪಯೋಗಿಸುವುದು ಕಡಿಮೆ." ನಮ್ಮ ಪ್ರಶ್ನೆಗೆ ನಾಗರಾಜು ಉತ್ತರಿಸಿದ.

ಕರಮಚಂದ ಎಚ್ಚರಿಕೆಯಿಂದ ಕಿಟಕಿಯನ್ನು ಪರಿಶೀಲಿಸಲು ತೊಡಗಿದ. ಎರಡು ಬಾಗಿಲುಗಳಲ್ಲಿ ತಲಾ ಕೆಳಗೊಂದು, ಮೇಲೊಂದು ಅಗಳಿಗಳಿದ್ದವು. ಅದರಲ್ಲಿ ಎಡಭಾಗದ ಬಾಗಿಲಿನ ಮೇಲಿನ ಅಗಳಿಯನ್ನು ಹೊರತು ಪಡಿಸಿ, ಉಳಿದೆಲ್ಲವೂ ಸಿಲುಕಿಸಿಕೊಂಡಿದ್ದವು. ಕರಮಚಂದ ಅದನ್ನೆಲ್ಲವೂ